ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ನಡೆದಂತಹ ಸಭೆಗೆ ಮಾನ್ಯ ರಾಮದಾಸ್‌ರವರೂ ಸಹಾ ಬಂದಿದ್ದರು. ಕಾರ್ಪೊರೇಷನ್, ಕೆ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಮೇಜರ್ ಇರಿಗೇಷನ್‌ನ ಉನ್ನತಾಧಿಕಾರಿಗಳ ಸಭೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಮೈಸೂರು ನಗರಕ್ಕೆ ಹೋದ ವರ್ಷ ನೀರು ಪೂರೈಕೆಯಲ್ಲಿ ಏನು ಅನಾನುಕೂಲವಾಗಿತ್ತು ಆ ಅನುಭವ ಹಿನ್ನೆಲೆಯಲ್ಲಿ ಈಗಾಗಲೇ ಮುಂಜಾಗ್ರತಾ ಕ್ರಮವಾಗಿ ಯಾವುದೇ ರೀತಿಯ ವ್ಯತ್ಯಯವಾಗದಂತೆ ಸಭೆಗಳನ್ನು ನಡೆಸಿ ಅದರ ಉಸ್ತುವಾರಿ ನೋಡಿಕೊಳ್ಳಲಿಕ್ಕೆ ಸರ್ಕಾರ ಎಲ್ಲಾ ರೀತಿಯ ಏರ್ಪಾಡುಗಳನ್ನೂ ಸಹಾ ಮಾಡುತ್ತಿದೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (i) ಕೊಳ್ಳೇಗಾಲ ತಾಲ್ಲೂಕಿನ ಗ್ರಾಮಗಳಲ್ಲಿ ಸಾರಾಯಿ ಅಂಗಡಿಗಳ ಹರಾಜು

ಶ್ರೀ ಜಿ. ರಾಜುಗೌಡ (ಹನೂರು): ಮಾನ್ಯ ಅಧ್ಯಕ್ಷರೇ, ಈ ಅಧಿವೇಶನ ಪ್ರಾರಂಭವಾದಾಗ ನಾನು ಅತಿ ಪ್ರಾಮುಖ್ಯವಾಗಿರತಕ್ಕಂಥ ಎರಡು ಗಮನ ಸೆಳೆಯುವ ಸೂಚನೆಗಳನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಆದರೆ ಅವುಗಳಿಗೆ ಇದುವರೆಗೂ ಕೂಡ ಉತ್ತರ ಬರಲಿಲ್ಲ. ಬಹುಶಃ ಈ ಕಾರ್ಯಾಂಗಕ್ಕೂ ಮತ್ತು ಶಾಸಕಾಂಗಕ್ಕೂ ಎಂತಹ ಮಧುರವಾದ ಬಾಂಧವ್ಯ ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ. ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕಳುಹಿಸಿಕೊಟ್ಟರೆ ಅದಕ್ಕೆ ಉತ್ತರ ಬಾರದಿದ್ದಲ್ಲಿ ಆತ ಯಾವ ರೀತಿಯಲ್ಲಿ ಇಲ್ಲಿ ತನ್ನ ಕಾರ್ಯನಿರ್ವಹಣೆ ಮಾಡಬೇಕು? ಎಂಬುದನ್ನು ದಯಮಾಡಿ ತಾವು ತಿಳಿಸಬೇಕು. ನನ್ನ ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿಗಳ ಹರಾಜು ಆದಾಗ ಆರು ಪಂಚಾಯಿತಿ ವ್ಯಾಪ್ತಿಯನ್ನು ಬಿಟ್ಟು ಹರಾಜು ಮಾಡಲಾಯಿತು. ಅಲ್ಲಿ ವೀರಪ್ಪನ್ ಕಾರ್ಯಾಚರಣೆ ಪ್ರದೇಶ ಎಂದು ಸರ್ಕಾರ 1991ರಿಂದಲೂ ಕೂಡ ಅಲ್ಲಿ ಹರಾಜನ್ನು ನಡೆಸಿಲ್ಲ. ಈ ಸಾರಿ ಪಡೆದಿರತಕ್ಕಂಥ ಗುತ್ತಿಗೆದಾರ ಆ ಆರು ಪಂಚಾಯಿತಿಗಳ ವ್ಯಾಪ್ತಿಯಲ್ಲೂ ಕೂಡ ತನ್ನ ವಹಿವಾಟು ನಡೆಸುತ್ತಿದ್ದಾನೆ. ಪ್ರತಿನಿತ್ಯ 25 ಸಾವಿರ ರೂಪಾಯಿಗಳು ನಷ್ಟವಾಗುತ್ತಿವೆ. ಮಾನ್ಯ ಆಬಕಾರಿ ಸಚಿವರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಇದರಲ್ಲಿ ಅಧಿಕಾರಿಗಳೂ ಕೂಡ ಶಾಮೀಲಾಗಿರುವುದರಿಂದ ಅವರು ನನಗೆ ಉತ್ತರವನ್ನು ಕಳುಹಿಸಿಲ್ಲ. ದಯಮಾಡಿ ಇದನ್ನು ಬಹಳ ತೀವ್ರವಾಗಿ ಪರಿಗಣಿಸಿ ನನಗೆ ಉತ್ತರವನ್ನು ತರಿಸಿಕೊಡಬೇಕು. ಸಾರಾಯಿ ಹರಾಜು ಎಲ್ಲಿ ಆಗಿಲ್ಲವೋ ಅಲ್ಲಿ ಸಾರಾಯಿಯನ್ನು ನಿಷೇಧ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಸಾರಾಯಿ ಅಂಗಡಿಗಳ ಹರಾಜು ಮಾಡಿಲ್ಲ ಎಂಬ ಬಗ್ಗೆ ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಅದರ ಬಗ್ಗೆ ಈಗ ಉತ್ತರ ಬಂದಿದೆ. ಉತ್ತರ ಈ ರೀತಿ ಇದೆ, ಅದನ್ನು ನಾನಿಲ್ಲಿ ಓದಬಯಸುತ್ತೇನೆ. ಕೊಳ್ಳೇಗಾಲ ತಾಲ್ಲೂಕಿನ ಐದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸಲಾಗಿತ್ತು. 2000-2001ನೇ ಸಾಲಿನಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಸಾರಾಯಿ ಕಿಸ್ತು ಕಳೆದ ಸಾಲಿಗಿಂತ ಪ್ರತಿಶತ 111.03ರಷ್ಟು

ಹೆಚ್ಚಾಗಿರುತ್ತದೆ. ಈ ತಾಲ್ಲೂಕಿನಲ್ಲಿ 85 ಸಾರಾಯಿ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಲಾಗಿತ್ತು. ಆದರೆ ಈ ಪೈಕಿ ಕೇವಲ 65 ಸಾರಾಯಿ ಅಂಗಡಿಗಳನ್ನು ತೆರೆಯಲಾಗಿದೆ. ಕಿಸ್ತು ಹೆಚ್ಚಿಸಿದ ಕಾರಣ ಸದರಿ ತಾಲ್ಲೂಕಿನ ಗುತ್ತಿಗೆದಾರರು ಕೊಳ್ಳೇಗಾಲ ತಾಲ್ಲೂಕಿನ ಗೋಪಿನಾಥಂ ಗ್ರಾಮ, ಪೊನ್ನಚ್ಚಿ, ಮಾದೇಶ್ವರ, ಮಾರ್ಥಳ್ಳಿ, ಹೂಗಿಯ ಹಾಗೂ ದಿನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 10 ಹಳ್ಳಿಗಳಲ್ಲಿ ಸಾರಾಯಿ ಅಂಗಡಿಗಳನ್ನು ತೆರೆಯಲು ಅನುಮತಿ ಕೋರಿದ್ದರು. ಇದಲ್ಲದೆ ಸದರಿ ಪ್ರಾಂತ್ಯದಲ್ಲಿ ಸಾರಾಯಿ ಅಂಗಡಿಗಳಿಲ್ಲದ ಕಾರಣ ಕಳ್ಳಭಟ್ಟಿ ತಯಾರಿಕೆ ಹೆಚ್ಚಾಗಿರುವುದಾಗಿ ಸಾರ್ವಜನಿಕರಿಂದ ದೂರುಗಳು ಇದ್ದವು. ಸದರಿ ಗ್ರಾಮಗಳಲ್ಲಿ ಕಳ್ಳಭಟ್ಟಿ ತಡೆಯುವುದಕ್ಕಾಗಿ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಲಾಗಿತ್ತು. ಆದರೆ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಕಾರ್ಯಾಚರಣೆ ನಡೆಯುತ್ತಿರುವ ಕಾರಣ ಪರಮಾನಗಿಯನ್ನು ಹಿಂತೆಗೆದುಕೊಳ್ಳಲಾಯಿತು. ಮೇಲ್ಕಂಡ ಪ್ರದೇಶದಲ್ಲಿ ಸಾರಾಯಿ ಮಾರಾಟವಾಗದಂತೆ ಕ್ರಮ ಜರುಗಿಸಲಾಗಿದೆ. ಈ ಪ್ರದೇಶದಲ್ಲಿ ಇದುವರೆಗೆ 107 ಬಾರಿ ದಾಳಿಗಳನ್ನು ಮಾಡಿ 11600 ಲೀಟರ್ ಕೊಳೆ, 5 ಲೀಟರ್ ಕಳ್ಳಭಟ್ಟಿ, 30 ಲೀಟರ್ ಸರ್ಕಾರಿ ಸಾರಾಯಿ ಜಪ್ತಿಯಾಗೂ 25 ಲೀಟರ್ ಮದ್ಯವನ್ನು ನಾಶಪಡಿಸಿ ಐದು ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಹೀಗೆ ಅಕ್ರಮ ಮಾರಾಟವಾಗದಂತೆ ತಡೆಗಟ್ಟಲು ಸರ್ಕಾರವು ಸೂಕ್ತ ಬಂದೋಬಸ್ತು ಮಾಡಿದೆ.

ಶ್ರೀ ಜಿ. ರಾಜುಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ ಯಾವ ಬಂದೋಬಸ್ತನ್ನೂ ಸಹಾ ಮಾಡಿರುವುದಿಲ್ಲ. ದಯಮಾಡಿ ಮಾನ್ಯ ಸಚಿವರು ನನ್ನ ಜೊತೆಗೆ ಬರಲಿ. ಅಲ್ಲಿ ಸಾರಾಯಿ ಮಾರಾಟವಾಗುತ್ತಿರುವುದನ್ನು ನಾನು ಅವರಿಗೆ ತೋರಿಸುತ್ತೇನೆ. ನಿಮ್ಮ ಜಿಲ್ಲಾ ವರಿಷ್ಠಾಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಅಲ್ಲಿ ಗುತ್ತಿಗೆದಾರ ತನ್ನ ಪ್ರಭಾವವನ್ನು ಬೀರಿದ್ದಾನೆ. ಪ್ರತಿ ದಿವಸ ಇಲ್ಲಿ ಸರ್ಕಾರಕ್ಕೆ 25 ಸಾವಿರ ರೂಪಾಯಿಗಳು ನಷ್ಟವಾಗುತ್ತಿದೆ. ದಯಮಾಡಿ ಹಣಕಾಸು ರಾಜ್ಯ ಸಚಿವರು ಮತ್ತು ಅಬಕಾರಿ ಸಚಿವರು ನನ್ನ ಜೊತೆಗೆ ಬಂದರೆ ಸತ್ಯ ಏನೆಂಬುದನ್ನು ನಾನು ಅವರಿಗೆ ತೋರಿಸುತ್ತೇನೆ. ದಯಮಾಡಿ ಮಾನ್ಯ ಸಚಿವರು ನನ್ನ ಜೊತೆಗೆ ಬರುವರೇ?

ಶ್ರೀ ಎಂ. ಶಿವಣ್ಣ: ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾನ್ಯ ಶಾಸಕರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಅಲ್ಲಿ ಕೈಗೊಳ್ಳಲಿಕ್ಕೆ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವನ್ನು ಮಧ್ಯಾಹ್ನ 1.55 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು)

ಅಧ್ಯಕ್ಷರು: ಬೆಳ್ಳಿಗ್ಗೆ ಶೂನ್ಯವೇಳೆ ಪ್ರಾರಂಭವಾಗಿದ್ದು, ಈಗ ಅದನ್ನೇ ಮುಂದುವರೆಸೋಣ. ಸದಸ್ಯರು ಹೇಳುವಾಗ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿದರೆ ಒಳ್ಳೆಯದು.